ದಿನಾಂಕ: 20.02.2021 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್ ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ಆನಂದ್.ವಿ.ಎನ್. ಎ.ಎಸ್.ಐ. ಸಂಚಾರಿ ಪೋಲಿಸ್ ಠಾಣೆ, ಕಾಮಾಕ್ಷಿಪಾಳ್ಯ.
5. ಶ್ರೀಮತಿ ಅಂಜನಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀಮತಿ ಲಿಖಿತ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
7. ಶ್ರೀ ವೆಂಕಟೇಶ್, ಕಂದಾಯ ಇಲಾಖೆ
8. ಶ್ರೀ ರಾಜೇಶ್, ಮಾರ್ಷಲ್
9. ಶ್ರೀ ಅನಿಲ್ ರಂಗಣ್ಣ, ಸದಸ್ಯರು,
10. ಶ್ರೀ ಶ್ರೀನಿವಾಸ್.ಎ. ಸದಸ್ಯರು
11. ಶ್ರೀ ಗಂಗಯ್ಯ, ಸದಸ್ಯರು
12. ಶ್ರೀ ರವೀಂದ್ರನಾಥ್, ಸದಸ್ಯರು
13. ಶ್ರೀ ರಾಜೇಶ್.ಎಂ. ಸದಸ್ಯರು
14. ಶ್ರೀ ಮಾರುತಿ.ಬಿ.ಹೆಚ್. ಸದಸ್ಯರು
15. ಶ್ರೀ ಸುಬ್ರಮಣ್ಯ, ಸದಸ್ಯರು

ದಿನಾಂಕ: 08.02.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 20.02.2021ರಂದು ಬೆಳಗ್ಗೆ10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫೀಸರ್ಸ್ ಸಮುಧಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ,** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಕಮಿಟಿಯ ಸದಸ್ಯರು ಮಾತನಾಡುತ್ತಾ, ಕಾಮಾಕ್ಷಿಪಾಳ್ಯದ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸಿರುವುದರಿಂದ ಸಾರ್ವಜನಿಕರಿ ಓಡಾಡಲು ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಕಾಮಾಕ್ಷಿಪಾಳ್ಯ ವ್ಯಾಪ್ತಿಯ ಬೆಸ್ಕಾಂ ಅಧಿಕಾರಿಗಳಿಗೆ ಸದರಿ ವಿಷಯವನ್ನು ತಿಳಿಸಿ, ಮುಂದಿನ ಸಭೆಗೆ ಹಾಜರಾಗುವಂತೆ ಪತ್ರ ಬರೆಯಲು ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸಿದರು.
2. ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ ಕೋವಿಡ್ ಲಸಿಕೆಯನ್ನು ವಾರ್ಡ್ ವ್ಯಾಪ್ತಿಯಲ್ಲಿರುವ ಹಿರಿಯ ನಾಗರೀಕರು ಕೋವಿಡ್ ಲಸಿಕೆಯನ್ನು ಸಾರ್ವಜನಿಕರಿಗೆ ಯಾವಾಗ ನೀಡುವುದಾಗಿ ಸಭೆಯಲ್ಲಿ ಕೋರಿದರು. ಇದ್ದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಈ ವಿಷಯದ ಬಗ್ಗೆ ಮೇಲಾಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆಸುತ್ತಿದ್ದು, ಚರ್ಚೆಯ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
3. ಸಬ್‌ಲೇನ್ ವತಿಯಿಂದ ಪೈಪ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುರ್ತಾಗಿ ಮುಗಿಸುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು. ಆದರೆ ಇದುವರೆವಿಗೂ ಕಾಮಗಾರಿಯು ಪೂರ್ಣಗೊಳ್ಳದೆ ಇರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವುದಾಗಿ ಶ್ರೀ ಅನಿಲ್ ರಂಗಣ್ಣ, ವಾರ್ಡ್ ಕಮಿಟಿ ಸದಸ್ಯರು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಬ್ ಲೇನ್ ಇಲಾಖೆಯವರಿಗೆ ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ತಿಳಿಸಲು ವಾರ್ಡ್ ಕಮಿಟಿ ಕಾರ್ಯದರ್ಶಿಗಳಿಗೆ ಸೂಚಿಸಿದರು.
4. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಹಾಕದಂತೆ ಮತ್ತು ಕಸವನ್ನು ರಸ್ತೆಯಲ್ಲಿ ಹಾಕದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಂತೆ ಮಾರ್ಷಲ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು. ಕ್ರಮ ವಹಿಸಬೇಕೆಂದು ಸಭೆಗೆ ತಿಳಿಸಿದರು.

Scanned with CamScanner

5. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು ಕಂದಾಯ ಇಲಾಖೆಯಲ್ಲಿ ಅಧಿಕಾರಿಗಳು ಇಲ್ಲದೆ ಇರುವುದರಿಂದ ಖಾತಾ ಟ್ರಾನ್ಸ್ ಫರ್, ಮತ್ತು ಕಂದಾಯ ಇಲಾಖೆಗೆ ಸಂಬಂಧಪಟ್ಟ ಇತರೆ ಕೆಲಸ ಕಾರ್ಯಗಳು ಸರಿಯಾಗಿ ಆಗದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಮುಂದಿನ ಸಭೆಯಲ್ಲಿ ಸಹಾಯಕ ಕಂದಾಯ ಅಧಿಕಾರಿಗಳು ಸಭೆಗೆ ಹಾಜರಾಗಲು ಪತ್ರ ಬರೆಯುವಂತೆ ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.

6. ಪಾಲಿಕೆಯ ಆಯವ್ಯಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಕಳೆದ ಸಾಲಿನ Spill Over ಕಾಮಗಾರಿಗಳನ್ನು ಮುಂದುವರೆಸಲು ಹಾಗೂ ಜನಬಿಡ ಪ್ರದೇಶಗಳಲ್ಲಿ ಇ-ಶೌಚಾಲಯವನ್ನು ಕಲ್ಪಿಸಲು ತಮ್ಮ ಉಧ್ಯಾನವನದಲ್ಲಿ ಕಾವಲುಗಾರರನ್ನು ನೇಮಿಸುವುದು, ಪ್ರಮುಖ ರಸ್ತೆಗಳಲ್ಲಿ ಸಿಸಿ ಟಿವಿಯನ್ನು ಅಳವಡಿಸುವುದು, ಎಲ್.ಇ.ಡಿ. ಲೈಟ್ ಗಳನ್ನು ಅಳವಡಿಸುವುದು, ಹಾಳಾಗಿರುವ ರಸ್ತೆಗಳನ್ನು ಡಾಂಬರೀಕರಣ ಮಾಡುವುದು, ಚರಂಡಿ ಹಾಗೂ ಪಾದಚಾರಿ ಮಾರ್ಗವನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿಗಳಲ್ಲಿ ಹೂಳು ಎತ್ತುವುದು ಪರಿಶಿಷ್ಟ ಜಾತಿ ಮತ್ತು ಪಂಗಡದವರು ವಾಸಿಸುತ್ತಿರುವ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸುವುದು ಮತ್ತು ಒಂಟಿ ಮನೆಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಆಯಾವ್ಯಯದಲ್ಲಿ ಸೇರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned with CamScanner